ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಬಿ ಶೆಡೂಲ್ ಆಸ್ತಿಗಳ ಬಗ್ಗೆ ರಿಲೀಸ್ ಡೀಡ್ ಆದ ನಂತರ ನನ್ನ ಅಣ್ಣನ ಹೆಸರಿಗೆ ಖಾತೆ ವರ್ಗಾವಣೆ ಆಗಿ ಪಹಣಿ ಪತ್ರಿಕೆ ಆಗಿದೆ ಎಂದರೆ ಸರಿ. ರಿಲೀಸ್ ಡೀಡ್ ಆದ ನಂತರ ನನ್ನ ಅಣ್ಣನ ಹೆಸರಿಗೆ 2007-08 ರಲ್ಲಿ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ .ನನ್ನ ಅಣ್ಣನ ಹೆಸರಿಗೆ ಪಹಣಿ ಪತ್ರಿಕೆ ಆಗಿದ್ದನ್ನು ನಾನು ಪ್ರಶ್ನಿಸಿಲ್ಲ. ಆಸ್ತಿಗಳನ್ನು ಕಾಶಮ್ಮ ತೆಗೆದುಕೊಂಡಾಗ ಮತ್ತು ನಂತರ ಅದು ಖಾಲಿ ಜಾಗವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಕಾಂಪೌಂಡ್ ಇತ್ತು ಎಂದು ತಿಳಿಸಿರುತಾರೆ. ಕಾಶಮ್ಮ ಕ್ರಯಕ್ಕೆ ತೆಗೆದುಕೊಂಡಾಗ ಕ್ರಯಪತ್ರದಲ್ಲಿ ಸ್ವತ್ತಿಗೆ ಕಾಂಪೌಂಡ್ ಹಾಕಲಾಗಿದೆ ಎಂದು ಬರೆಯಲಾಗಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಿ ಹೇಳಬೇಕು ಎಂದು ತಿಳಿಸಿರುತ್ತಾರೆ . ರಿಲೀಸ್ ಡೀಡ್ ಆದ ನಂತರ ಪಹಣಿ ಪತ್ರಿಕೆ ಆದ ನಂತರ 1 ನೇ ಪ್ರತಿವಾದಿಯಾದ ನನ್ನ ಅಣ್ಣನೇ ತೆರಿಗೆ ವಗೈರೆ ಗಳನ್ನು ಕಟ್ಟಿಕೊಂಡು ಬರುತಿದ್ದಾರೆ ಎಂದರೆ ಸಾಕ್ಷಿ ಕುಟುಂಬದ ಹಣದಿಂದ ಕಟ್ಟುತಿದ್ದರು ಎಂದು ತಿಳಿಸಿರುತ್ತಾರೆ. ಎಷ್ಟು ತೆರಿಗೆ ಕಟ್ಟುತಿದ್ದರು ಎಂದು ನನಗೆ ನೆನಪಿಲ್ಲ . ನಾನು ಕುಟುಂಬದ ಹಣದ ಬಗ್ಗೆ ಲೆಕ್ಕಪತ್ರ ಇಟ್ಟಿಲ್ಲ . ಆದರೇ ನನ್ನ ಅಣ್ಣನೇ ಎಲ್ಲಾ ಲೆಕ್ಕವನ್ನು ಇಟ್ಟಿದ್ದ ಅದನ್ನು ನಾನು ನೋಡಿರುತ್ತೇನೆ. ಎಲ್ಲಿ ಮತ್ತು ಯಾವಾಗ ನೋಡಿದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ. ಕುಟುಂಬದ ಹಣದಿಂದ ತೆರಿಗೆ ಪಾವತಿ ಮಾಡಲಾಗಿದೆ ಎಂದು ಯಾವ ಆದಾರದಲ್ಲಿ ಹೇಳುತಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕುಟುಂಬದ ಆದಾಯ ಬಿಟ್ಟರೇ ನನ್ನ ಅಣ್ಣನಿಗೆ ಬೇರೆ ಆದಾಯ ಇರಲಿಲ್ಲ. ಆದ್ದರಿಂದ ಕುಟುಂಬದ ಹಣದಿಂದ ತೆರಿಗೆ ಪಾವತಿಸಿದ್ದಾರೆ ಎಂದು ಹೇಳುತಿದ್ದೇನೆ. ಕುಟುಂಬದ ಆದಾಯ ಎಂದರೆ ಹಿಂದೂ ಅವಿಭಕ್ತ ಕುಟುಂಬದ

ಆದಾಯವಾ  ಅಥವಾ ಯಾವ ಕುಟುಂಬದ ಆದಾಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನಮ್ಮ ಕುಟುಂಬದ ಆದಾಯ ಎಂದು ತಿಳಿಸಿರುತ್ತಾರೆ . ನಿಮ್ಮದೇ ಕುಟುಂಬದ ಆದಾಯ ಎಂದು ಹೇಳಿದರೇ ಯಾವ ಕುಟುಂಬದ ಆದಾಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ನಮ್ಮ ಕುಟುಂಬದ ಆದಾಯ ಎಂದು  ಹೇಳಿ ಕಾನೂನು ಪುಸ್ತಕ ನೋಡಿ ಹೇಳಬೇಕಾಗುತ್ತದೆ ಎಂದು ತಿಳಿಸಿರುತಾರೆ. ನಿಮ್ಮ ಕುಟುಂಬ ಎಂದು ಹೇಳಿದರೇ ಅದು  ಹಿಂದೂ ಅವಿಭಕ್ತ ಕುಟುಂಬವಾ ಅಥವಾ ಯಾವ ಕುಟುಂಬ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಎರಡು ಕುಟುಂಬ ಎಂದು ಹೇಳಲು ಸಾಧ್ಯವಿಲ್ಲ ನೋಡಿ ಹೇಳಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ನಮ್ಮ ಕುಟುಂಬದ ಹಣದಿಂದಲೇ ಕಂದಾಯ ತೆರಿಗೆ ಪಾವತಿ ಮಾಡುತಿದ್ದರು ಎಂದು ವಾದಪತ್ರದಲ್ಲಿ ಹೇಳಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಿ ಹೇಳಬೇಕು ನೆನಪಿಲ್ಲ ಎಂದು ತಿಳಿಸಿರುತಾರೆ.

ನನಗೆ 51 ವರ್ಷ ವಯಸ್ಸು. ನನಗೆ ಯಾವುದೇ  ಸಮಸ್ಯೆ ಇಲ್ಲ . ನನಗೆ ನೆನಪಿನ ಶಕ್ತಿ ಬಗ್ಗೆ ಯಾವುದೇ ಸಮಸ್ಯೆ ಇಲ್ಲ. ನನ್ನ ಅಣ್ಣ ದಾವಾ ಬಿ ಶೆಡೂಲ್ ಸ್ವತ್ತಿಗೆ ರೂ 60,000/- ಹಣ ಖರ್ಚು ಮಾಡಿ ಬಾರ್ಬಡ್ ಫೆನ್ಸ್ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಬಿ ಶೆಡೂಲ್ ಸ್ವತ್ತಿನಲ್ಲಿ ಒಂದನೇ ಪ್ರತಿವಾದಿ ರೂ 1,50,000 ಹಣ ಖರ್ಚು ಮಾಡಿ ಬೋರ್ವೆಲ್ ಹಾಕಿಸಿರುತ್ತಾರೆ ಎಂದರೆ ಬೋರ್ವೆಲ್ ಮೊದಲೇ ಇತ್ತು. ಬೋರ್ ವೆಲ್ ಕ್ರಯಕ್ಕೆ ಪಡೆದುಕೊಳ್ಳುವಾಗಲೇ ಇತ್ತು. ಸಾಕ್ಷಿಗೆ ನಿಪಿ-81 ಮತ್ತು 82 ನ್ನು ತೋರಿಸಿ ಅದರಲ್ಲಿ ಕಾಶಮ್ಮ ಕ್ರಯಕ್ಕೆ ಪಡೆದಾಗ ಕಾಂಪೌಂಡ್ ಹಾಕಿರುವ ಬಗ್ಗೆ ಶೆಡೂಲ್ ನಲ್ಲಿ ಮತ್ತು ಬೊರ್ವೆಲ್ ಹಾಕಿರುವ ಬಗ್ಗೆ ಶೆಡೂಲ್ ನಲ್ಲಿ ಕಂಡುಬಂದಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಸದ್ರಿ ದಾಖಲೆಗಳನ್ನು ಪರಿಶೀಲಿಸಿ ಸದ್ರಿ ದಾಖಲೆಗಳಲ್ಲಿ ಆ ಬಗ್ಗೆ ಬರೆದಿಲ್ಲ ಎಂದು ತಿಳಿಸಿರುತ್ತಾರೆ. ಬೊರ್ವೆಲ್ ಗೆ ನನ್ನ ಅಣ್ಣ ಪಂಪ್ ಸೆಟ್ ಹಾಕಿಸಿದ್ದಾರೆ ಎಂದರೆ ಸರಿ . ರೂ 250000

ಹಣ ಖರ್ಚು ಮಾಡಿ ನನ್ನ ಅಣ್ಣ ಎರಡೂ ಕಡೆ ಕಾಂಪಾಂಡ್ ಗೇಟ್ ಹಾಕಿಸಿದಾರೆ ಎಂದರೆ ಅದು ಮೊದಲೇ ಇತ್ತು ಎಂದು ತಿಳಿಸಿರುತ್ತಾರೆ. ಕಾಶಮ್ಮ ಕ್ರಯಕ್ಕೆ ತೆಗೆದುಕೊಳ್ಳುವಾಗಲೇ ಎರಡೂ ಕಡೆ ಕಾಂಪೌಂಡ್ ಗೇಟು ಇತ್ತು. ವಿದ್ಯುತ್ ಚಕ್ತಿ ಕಂಭವನ್ನು ಬದಲಾಯಿಸಿ ಬೇರೆ ಕಂಭವನ್ನು ಹಾಕಿಸಿದ್ದಾರೆ ಎಂದರೆ ಸರಿ. ಅದಕ್ಕೆ ವ್ಯವಸಾಯ ಉಪಯೋಗಕ್ಕಾಗಿ ವಿದ್ಯುತ್ ಚಕ್ತಿ ಸೌಲಭ್ಯವನ್ನು ಪಡೆದು ಒಂದನೇ ಪ್ರತಿವಾದಿ ವ್ಯವಸಾಯ ಮಾಡುತಿದ್ದಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು Conversion ಆಗದೇ ಇದ್ದುದನ್ನು ಬಿಟ್ಟರೇ ಅದು ವಾಣಿಜ್ಯಕ್ಕಾಗಿ ಉಪಯೋಗಿಸುತಿದ್ದಾರೆ ಎಂದು ತಿಳಿಸಿರುತ್ತಾರೆ. ರಿಲೀಸ್ ಡೀಡ್ ಆದಾಗಿನಿಂದ ನನ್ನ ಅಣ್ಣ ಒಂದನೇ ಪ್ರತಿವಾದಿಯೇ ಸ್ವಾಧೀನ ಹೊಂದಿರುತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಒಟ್ಟಿಗೆ ಈಗಲೂ ಕೂಡ ಸ್ವಾಧೀನದಲ್ಲಿ ಇದ್ದೇವೆ ಎಂದು ತಿಳಿಸಿರುತಾರೆ . ಈ ರಿಲೀಸ್ ಡೀಡ್ ರದ್ದಾಗಬೇಕು ಎಂದು ನಾನು ಯಾವುದೇ ನ್ಯಾಯಲಯದಲ್ಲಿ ದಾವೆಯನ್ನು ಹಾಕಿಲ್ಲ. ರಿಲೀಸ್ ಡೀಡ್ ರದ್ದಾಬೇಕು ಎಂದು ನಾನು ನಿವೃತ್ತಿ ಕೇಳಿಲ್ಲ ಎಂದರೆ ಸಾಕ್ಷಿ ನಾವು ವಿಭಾಗವನ್ನು ಕೇಳಿದ್ದೇವೆ ಎಂದು ತಿಳಿಸಿರುತಾರೆ . 2007 ರಲ್ಲಿ ಆದ ರಿಲೀಸ್ ಡೀಡ್ ಇಲ್ಲಿವರೆಗೂ ರದ್ದಾಗದಿದ್ದರಿಂದ ಯಾವ ಆದಾರದಲ್ಲಿ ಅದರಲ್ಲಿ ಪಾಲು ಕೇಳುತಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದನೇ ಪ್ರತಿವಾದಿಯ ಡಾಮಿನೇಶನ್ ನಲ್ಲಿ ರಿಲೀಸ್ ಡೀಡ್ ಆಗಿರುವುದರಿಂದ ಮತ್ತು ಒಟ್ಟಿಗೆ ಸೇರಿ ಅದನ್ನು ಅಬಿವೃದ್ದಿಪಡಿಸಿ ಹಂಚಿಕೊಳ್ಳುವ ಎಂದು ಹೇಳಿದ್ದರಿಂದ ನಾವು ರಿಲೀಸ್‌ಡೀಡ್ ನ್ನು ರದ್ದು ಮಾಡಿ ಎಂದು ಕೇಳಿರಲಿಲ್ಲ, ಆ ಕಾರಣದಿಂದ ಈಗ ವಿಭಾಗ ಕೇಳುತಿದ್ದೇವೆ ಎಂದು ತಿಳಿಸಿರುತ್ತಾರೆ. ನನ್ನ ಅಣ್ಣನ ಡಾಮೀನೇಶನ್ ನಲ್ಲಿ ರಿಲೀಸ್ ಡೀಡ್ ಆಯಿತು ಎಂದು ಈ ದಾವೆಯಲ್ಲಿ ಹೇಳಿದನ್ನು ಬಿಟ್ಟರೇ ಬೇರೆ ಎಲ್ಲಿಯಾದರೂ ಹೇಳಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬೇರೆ ಎಲ್ಲಿಯೂ ಹೇಳುವಂತ ಅವಕಾಶವೇ ಇರಲಿಲ್ಲ ಎಂದು ತಿಳಿಸಿರುತಾರೆ.

ರಿಲೀಸ್ ಡೀಡ್ ಆದ ನಂತರ ಒಂದನೇ ಪ್ರತಿವಾದಿ ದಾವಾ ಬಿ ಶೆಡೂಲ್ ಗೆ ಖಾತೆ ಮಾಡಿಸಿಕೊಂಡು ಅವರೇ ಕಂದಾಯ ವಗೈರೆ ಕಟ್ಟಿ ದಾವಾ ಬಿ ಶೆಡೂಲ್ ನಲ್ಲಿ ಏಕಸ್ವಾಧೀನದಲ್ಲಿ ಅವರು ಇದ್ದಾರೆ ಎಂದರೆ ಸಾಕ್ಷಿ ಸುಳ್ಳು ದಾಖಲೆಗಳನ್ನು ಮಾಡಿಕೊಂಡಿದ್ದಾರೆ ಎಂದು ತಿಳಿಸಿರುತಾರೆ. ಸುಳ್ಳು ದಾಖಲೆಗಳು ಎಂದರೆ ಯಾವೆಲ್ಲಾ ಸುಳ್ಳು ದಾಖಲೆಗಳು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬಿ ಶೆಡೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಸುಳ್ಳು ದಾಖಲೆಗಳು ರಿಲೀಸ್ ಡೀಡ್ ಆದ ನಂತರ ಮಾಡಿಕೊಂಡಿಲ್ಲ ಎಂದು ತಿಳಿಸಿರುತಾರೆ. ಬಿ ಶೆಡೂಲ್ ಸ್ವತ್ತಿಗೆ Court fee ತಪ್ಪಿಸಿ ಮೋಸದಿಂದ ರಿಲೀಸ್ ಡೀಡ್ ಮಾಡಿಕೊಂಡಿದ್ದಾರೆ ಎಂದು ನಾನು ಅದರಲ್ಲಿ ಕೂಡ ಪಾಲು ಕೇಳುತಿದ್ದೇನೆ ಎಂದರೆ ಸುಳ್ಳು. ರಿಲೀಸ್ ಡೀಡ್ ನ್ಯಾಯಯುತವಾಗಿ ಆಗಿರುವುದರಿಂದ ನಾನು ರಿಲೀಸ್ ಡೀಡ್ ನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ತಿಳಿಸಿರುತಾರೆ. ರಿಲೀಸ್‌ಡೀಡ್ ಯಾವುದೇ ಕಾರಣಕ್ಕೂ ಜಾರಿಗೆ ಬಂದಿಲ್ಲ ಎಂದು ನಾನು ನನ್ನ ವಾದಪತ್ರದಲ್ಲಿ ಹೇಳಿಲ್ಲ . ರಿಲೀಸ್ ಡೀಡ್ ನಾಮಕವಸ್ತೆ ದಾಖಲೆ ಎಂದು ನಾನು ನನ್ನ ವಾದಪತ್ರದಲ್ಲಿ ಹೇಳಿಲ್ಲ . ರಿಲೀಸ್ ಡೀಡ್ ಆಗಿದ್ದರೂ ಕೂಡ ಜಂಟಿ ಸ್ವಾಧೀನದಲ್ಲಿ ಇದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಿಪಿ 56 ರಿಂದ 59 ರದಾಖಲೆಗಳ ಮುಖೇನ ನನ್ನ ಅಜ್ಜಿ ಕಾಶಮ್ಮ ಕಲ್ಲಡ್ಕ ದ ಆಸ್ತಿಗಳನ್ನು ಮಾರಾಟ ಮಾಡಿ ನಿಪಿ 81 ಮತ್ತು 82 ರಲ್ಲಿ ಕಾಣುವ ಈ ದಾವಾಸ್ವತ್ತಿನ ಬಿ ಶೆಡೂಲ್ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸರಿ . ನಂತರ ಕಾಶಮ್ಮ ಮಂಗಳೂರಿನ Golden apartments ನ flat ನ್ನು ಖರೀದಿ ಮಾಡಲು ಕರಾರು ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಕಲ್ಲಡ್ಕ ಆಸ್ತಿಯನ್ನು ಕ್ರಯಕ್ಕೆ ಪಡೆದ ವ್ಯಕ್ತಿ ಕ್ರಯದ ಹಣವಲ್ಲದೇ ಮಂಗಳೂರಿನ Golden apartments ನಲ್ಲಿ ಫ್ಲ್ಯಾಟ್ ನ್ನು ಕೊಡುವುದಾಗಿ ಹೇಳಿದ್ದರು ಆದ್ದರಿಂದ flat ಅದರ ಒಂದು ಭಾಗ ಎಂದು ತಿಳಿಸಿರುತ್ತಾರೆ . ಸದ್ರಿ flat ಬಗ್ಗೆ

apartment ನ ಮಾಲೀಕರಾದ modern builders ಮತ್ತು ಕಾಶಮ್ಮ ನಡುವೆ ಕರಾರು ಆಯಿತು ಎಂದರೆ ಸಾಕ್ಷಿ ನೋಡಿಲ್ಲ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಕರಾರನ್ನು ತೋರಿಸಿದಾಗ ಸಾಕ್ಷಿ ಕರಾರು ಈಗ ನೋಡಿದೆ ಆದರೇ ನನ್ನ ಒಪ್ಪಿಗೆ ಇಲ್ಲ ಎಂದು ತಿಳಿಸಿರುತಾರೆ. ಸಾಕ್ಷಿ ಮುಂದುವರಿದು ನನ್ನ ಅಣ್ಣನಿಗೆ ನಕಲಿ ದಾಖಲೆಯನ್ನು ಕೂಡ ತಯಾರಿಸುವ ಅಬ್ಯಾಸ ಉಂಟು ಎಂದು ತಿಳಿಸಿರುತಾರೆ. ಷದ್ರಿ ಕರಾರಿನ ಮೂಲಕ ಕಾಶಮ್ಮ ರೂ 5,00,000 ಮುಂಗಡ ಹಣವನ್ನು ಪಾವತಿಸಿದ್ದಾರೆ ಎಂದರೆ ದಾಖಲೆಗಾಗಿ ಒಂದನೇ ಪ್ರತಿವಾದಿಯೇ ಅದನ್ನೆಲ್ಲಾ ಮಾಡಿದ್ದಾರೆ ಎಂದು ತಿಳಿಸಿರುತಾರೆ. ನನ್ನ ಅಜ್ಜಿ ಕಾಶಮ್ಮ ನ ರುಜು ಎಂದು ಬರೆದು ಸಹಿ ಮಾಡುತ್ತಾರೆ ಎಂದರೆ ಸರಿ . ರೂ 5,00,000 ಮುಂಗಡ ಹಣ ಪಾವತಿಯಾದ ನಂತರ flat ನ್ನು ಕೊಡದೇ ಇದ್ದುದರಿಂದ ಮತ್ತು ರೂ 5,00,000 ಕೊಡದೇ ಇದ್ದುದರಿಂದ ನನ್ನ ಅಜ್ಜಿ ಕಾಶಮ್ಮ ರಾಜ್ಯ ಗ್ರಾಹಕರ ವೇದಿಕೆಯಲ್ಲಿ ದಾವೆಯನ್ನು ಹೂಡಿದ್ದರು ಎಂದರೆ ಸಾಕ್ಷಿ ನನ್ನ ಅಜ್ಜಿ ಅವಿದ್ಯಾವಂತಳಾಗಿದ್ದು ಎಲ್ಲವನ್ನು ಒಂದನೇ ಪ್ರತಿವಾದಿಯೇ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ . ಸಾಕ್ಷಿ ಮುಂದುವರಿದು ಬಿಲ್ಡರ್ apartment ನ್ನು ಕಟ್ಟಿ ಪೂರ್ಣ ಗೊಳಿಸಿಲ್ಲ ಅವರು ರೂ 500000 ಗಳನ್ನು ಮನೆಗೆ ತಂದು ಕೊಟ್ಟಿರುತ್ತಾರೆ ಎಂದು ತಿಳಿಸಿರುತಾರೆ . ಅಂದರೆ ಬಿಲ್ಡರ್ ಗೆ ರೂ 5,00,000 ಮುಂಗಡವಾಗಿ ಪಾವತಿಯಾಗಿತ್ತು ಎಂದು ಒಪ್ಪುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೊಟ್ಟಿರಬಹುದು ಎಂದು ತಿಳಿಸಿರುತಾರೆ . ರಾಜ್ಯ ಗ್ರಾಹಕರ ವೇದಿಕೆಗೆ ಕಾಶಮ್ಮ ನವರೇ ಸ್ವತಹ ದೂರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ . ರಾಜ್ಯ ಗ್ರಾಹಕರ ವೇದಿಕೆಯು ರೂ 500000 ಮತ್ತು ಅದಕ್ಕೆ ಬಡ್ಡಿಯನ್ನು ಕೊಡಬೇಕು ಎಂದು ಆದೇಶ ಮಾಡಿತ್ತು ಎಂದರೆ ಸಾಕ್ಷಿ ಕಾಶಮ್ಮ ಮಾಡಿದ್ದಲ್ಲ ಅದನ್ನು ನನ್ನ ಅಣ್ಣನೇ ಕಾಶಮ್ಮ ಸಹಿ ಪಡೆದು ಅರ್ಜಿ ಹಾಕಿದ್ದ ಎಂದು ತಿಳಿಸಿರುತ್ತಾರೆ .

ಒ.ಎಸ್. - 34/2020

ಪಿ.ಡಬ್ಲ್ಯು - 01

ಸಾಕ್ಷಿಗೆ ರಾಜ್ಯ ಗ್ರಾಹಕರ ವೇದಿಕೆ ಮಾಡಿದ ಆದೇಶದ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ನೋಡಬೇಕು ಈಗ ಹೇಳಲು ಸಾಧ್ಯವಿಲ್ಲ ಎಂದು ತಿಳಿಸಿರುತ್ತಾರೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.